MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 19-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶ್ಯಯನ್ ಪಾಮೆಣ್ಣೆ ಫ್ಯೂಚರ್ ದರ 4 ತಿಂಗಳಲ್ಲೇ ಅತಿ ಹೆಚ್ಚಿನ ದೈನಿಕ ದರ ಹೆಚ್ಚಳ

ಮಲೇಶ್ಯಯನ್ ಪಾಮೆಣ್ಣೆ ಫ್ಯೂಚರ್ ದರ 8.50 ಶೇಕಡಾ ಹೆಚ್ಚಳವಾಗಿದ್ದು, ಇದು ಹಿಂದಿನ 4 ತಿಂಗಳಲ್ಲೇ ಅತಿ ಹೆಚ್ಚಿನ ದೈನಿಕ ದರ ಹೆಚ್ಚಳವಾಗಿದೆ. ಇಂಡೋನೇಶಿಯಾ ಆಗಸ್ಟ್ 31 ರ ತನಕ ಪಾಮೆಣ್ಣೆಗೆ ರಫ್ತು ಲೆವಿಯನ್ನು ವಿಧಿಸುತ್ತಿಲ್ಲ(ಹಿಂತೆಗೆದಿದೆ). ಆಗಸ್ಟ್ 31 ರ ತನಕ ಇಂಡೋನೇಶಿಯಾ 6 ಮಿಲಿಯನ್ ಟನ್ ಪಾಮೆಣ್ಣೆ ರಫ್ತು ಮಾಡಿ ಹೆಚ್ಚಳವಾಗುತ್ತಿರುವ ದಾಸ್ತಾನು ಕಡಿತಗೊಳಿಸಲಿದೆಯೆನ್ನಲಾಗಿದೆ. ಸೋಯಾ ಎಣ್ಣೆ ಚಿಕಾಗೋ ದರ ಹೆಚ್ಚಳ ಪಾಮೆಣ್ಣೆ ದರ ಹೆಚ್ಚಳಕ್ಕೆ ಪೂರಕವಾಗಿದೆ. ಭಾರತೀಯ ಮಾರುಕಟ್ಟೆಯಲ್ಲಿ ಖಾದ್ಯ ತೈಲ ದರಗಳು ಲೀಟರ್‌ಗೆ ರೂ.5 ರಿಂದ 30 ತನಕ ಇಳಿಕೆಯಾಗುತ್ತಿದೆಯೆನ್ನಲಾಗಿದೆ.

## ದುರ್ಬಲ ಬೇಡಿಕೆ ಜೋಳ ದರ ಇಳಿಕೆ

ದಾವಣಗೆರೆ ಹಾಗೂ ಬಿಹಾರದ ಪುರೇನಿಯಾದಲ್ಲಿ ಪಶು ಆಹಾರ, ಹಕ್ಕಿ ಆಹಾರ ತಯಾರಕರು ಹಾಗೂ ದೊಡ್ಡ ಖರೀದಿದಾರರಿಂದ ಬೇಡಿಕೆ ಕಡಿಮೆಯಾದ್ದರಿಂದ ಜೋಳ ದರ ಇಳಿಕೆಯಾಗಿದೆ ಆವಕ ಸ್ಥಿರವಿದೆ.

## ಬೇಳೆಕಾಳು ಬಿತ್ತನೆ ಪ್ರಗತಿ, ತೊಗರಿ ಬಿತ್ತನೆ ಇಳಿಕೆ

ಒಟ್ಟು ಬೇಳೆಕಾಳು ಬಿತ್ತನೆ ಜುಲೈ 15 ತನಕ 140.18 ಲಕ್ಷ ಹೆಕ್ಟೇರ್(ಪೂರ್ಣಪ್ರಮಾಣ)ಗಳಲ್ಲಿ 72.66 ಲಕ್ಷ ಹೆಕ್ಟೇರ್‌ಗಳಿಗೆ ತಲುಪಿದ್ದು ಹಿಂದಿನ ಇದೇ ಅವಧಿಯಲ್ಲಿ 66.69 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ. ಇದರಲ್ಲಿ ತೊಗರಿ ಬಿತ್ತನೆ ಜುಲೈ 15ರ ತನಕ 25.81 ಲಕ್ಷ ಹೆಕ್ಟೇರ್‌ಗಳಾಗಿದ್ದು, ಹಿಂದಿನ ವರ್ಷ ಇದೇ ಅವಧಿಯಲ್ಲಿ 31.58 ಲಕ್ಷ ಹೆಕ್ಟೇರ್‌ಗಳಾಗಿತ್ತೆನ್ನಲಾಗಿದೆ. ಹೆಸರುಕಾಳು ಹಿಂದಿನ ವರ್ಷ ಇದೇ ಅವಧಿಯಲ್ಲಿಗಿದ್ದ 15.85 ಲಕ್ಷ ಹೆಕ್ಟೇರ್ ಗಳಿಂದ ಈ ವರ್ಷ ಜುಲೈ 15ಕ್ಕೆ 20.19 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆಯೆನ್ನಲಾಗಿದೆ. ಉದ್ದು ಬಿತ್ತನೆ ಹಿಂದಿನ ವರ್ಷದ ಇದೇ ಅವಧಿಯಲ್ಲಾಗಿದ್ದ 15.67 ಲಕ್ಷ ಹೆಕ್ಟೇರ್‌ಗಳಿಂದ 18.06 ಲಕ್ಷ ಹೆಕ್ಟೇರ್‌ಗಳಿಗೇರಿದೆ.

## ಸೋಯಾಬೀನ್ ಬಿತ್ತನೆ ಪ್ರಗತಿ

ಈ ವರ್ಷ ಜುಲೈ 15 ರ ತನಕ 99.35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೋಯಾಬೀನ್ ಬಿತ್ತನೆಯಾಗಿದ್ದು ಹಿಂದಿನ ವರ್ಷ ಇದೇ ಅವಧಿಯಲ್ಲಿ 90.32 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ. ಒಟ್ಟು ಬಿತ್ತನೆ ಪ್ರದೇಶ 115.51 ಲಕ್ಷ ಹೆಕ್ಟೇರ್ ಆಗಿದೆ. ಹಾಗೆಯೇ ಇತರ ಖಾದ್ಯತೈಲ ಬೀಜ ಬಿತ್ತನೆಗಳೂ ಪ್ರಗತಿಯಲ್ಲಿದ್ದು ಹಿಂದಿನ ವರ್ಷದ ಈ ಅವಧಿಯಲ್ಲಾಗಿದ್ದ ಬಿತ್ತನೆಗಿಂತ ಹೆಚ್ಚಿನ ಪ್ರದೇಶಗಳಲ್ಲಿ ಬಿತ್ತನೆಯಾಗಿದೆಯೆನ್ನಲಾಗಿದೆ.

## ಜೋಳ ಬಿತ್ತನೆ ಪ್ರದೇಶ ಇಳಿಕೆ

ಜುಲೈ 15 ರ ತನಕ ಜೋಳ ಬಿತ್ತನೆ ಹಿಂದಿನ ವರ್ಷ ಈ ಅವಧಿಯ 56.69 ಲಕ್ಷ ಹೆಕ್ಟೇರ್ ಪ್ರದೇಶದಿಂದ 49.90 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಇಳಿಕೆ ಯಾಗಿದೆ. ಒಟ್ಟು ಬಿತ್ತನೆ ಪ್ರದೇಶ 74.68 ಲಕ್ಷ ಹೆಕ್ಟೇರ್ ಆಗಿದೆ.